# ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯ

ಕರ್ನಾಟಕ ಸರ್ಕಾರವು ಅಸಹಾಯಕ, ಅಶಕ್ತ ವ್ಯಕ್ತಿಗಳಿಗೆ, ವಿಧವೆಯರಿಗೆ ಅಂಗವಿಕಲರಿಗೆ, ಲಿಂಗತ್ವ ಅಲ್ಪ ಸಂಖ್ಯಾತರು ಹಾಗೂ ಅವಿವಾಹಿತ/ವಿಚ್ಛೇಧಿತ ಮಹಿಳೆಯರಿಗೆ ಅನೇಕ ಸಾಮಾಜಿಕ ಭದ್ರತೆ ಯೋಜನೆಗಳನ್ನು ಕಂದಾಯ ಇಲಾಖೆಯ ಮೂಲಕ ಅನುಷ್ಠಾನಗೊಳಿಸುತ್ತಿರುತ್ತದೆ. ಈ ಯೋಜನೆಗಳನ್ನು ಇನ್ನೂ ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುವಂತೆ ಮಾಡಲು ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯವನ್ನು ಕಂದಾಯ ಇಲಾಖೆಯಡಿಯಲ್ಲಿ ಸೃಜಿಸಲಾಗಿದೆ. ನಿರ್ದೇಶನಾಲಯವು ಸರ್ಕಾರಿ ಆದೇಶ ಸಂಖ್ಯೆ:ಕಂ.ಇ.44 ಎಂಎಸ್‌ಟಿ 2007, ದಿನಾಂಕ:08-05-2007ರಂತೆ ಅಸ್ತಿತ್ವಕ್ಕೆ ಬಂದಿದೆ. ನಿರ್ದೇಶನಾಲಯದ ಮುಖ್ಯ ಉದ್ದೇಶವೇನೆಂದರೆ ಸಾಮಾಜಿಕ ಭದ್ರತೆಗಳಿಗೆ ಸಂಬಂಧಪಟ್ಟ ಯೋಜನೆಗಳನ್ನು ಜಾರಿಗೊಳಿಸುವುದಾಗಿರುತ್ತದೆ. ಕಂದಾಯ ಇಲಾಖೆಯ ತಹಶೀಲ್ದಾರ್/ ಉಪ ತಹಶೀಲ್ದಾರ್ ಮಂಜೂರಾತಿ ಅಧಿಕಾರಿಗಳಾಗಿದ್ದು, ಜಿಲ್ಲಾಧಿಕಾರಿಗಳು ಹಾಗೂ ಪ್ರಾದೇಶಿಕ ಆಯುಕ್ತರುಗಳು ಮೇಲ್ವಿಚಾರಣಾಧಿಕಾರಿಗಳಾಗಿರುತ್ತಾರೆ.

ಕೆಳಕಂಡ ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ಯೋಜನೆಗಳನ್ನು ನಿರ್ದೇಶನಾಲಯವು ನಿರ್ವಹಿಸುತ್ತದೆ.

**ಕ್ರ.ಸಂ. ಯೋಜನೆಗಳ ಹೆಸರು**

1. ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ
2. ವಿಧವಾ ವೇತನ
3. ಅಂಗವಿಕಲರ ವೇತನ
4. ಸಂಧ್ಯಾ ಸುರಕ್ಷಾ ವೇತನ
5. ಮನಸ್ವಿನಿ ಯೋಜನೆ
6. ಮೈತ್ರಿ ಯೋಜನೆ
7. ಎಂಡೋಸಲ್ಫಾನ್ ಸಂತ್ರಸ್ಥರಿಗೆ ಮಿತ ವೇತನ
8. ಸಾಲಭಾದೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತ ಪತ್ನಿಯರಿಗೆ ಪರಿಷ್ಕರಿಸಿದ ವಿಧವಾ ವೇತನ
9. ಆಸಿಡ್ ದಾಳಿಗೆ ಒಳಗಾದ ಮಹಿಳೆಯರಿಗೆ ಸಹಾಯಧನ
10. ರಾಷ್ಟ್ರೀಯ ಕುಟುಂಬ ನೆರವು ಯೋಜನೆ
11. ಅಂತ್ಯ ಸಂಸ್ಕಾರ ಸಹಾಯಧನ ಯೋಜನೆ
12. ಆದರ್ಶ ವಿವಾಹ ಯೋಜನೆ
13. ಆಮ್ ಆದ್ಮಿ ಬಿಮಾ ಯೋಜನೆ

## 1. ಕೇಂದ್ರ ಸರ್ಕಾರ ಪುರಸ್ಕೃತ ಯೋಜನೆಗಳು:

ಕೇಂದ್ರ ಸರ್ಕಾರದ ರಾಷ್ಟ್ರೀಯ ಸಾಮಾಜಿಕ ನೆರವು ಯೋಜನೆಯಡಿಯಲ್ಲಿ ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ, ಇಂದಿರಾ ಗಾಂಧಿ ರಾಷ್ಟ್ರೀಯ ವಿಧವಾ ವೇತನ, ಇಂದಿರಾ ಗಾಂಧಿ ರಾಷ್ಟ್ರೀಯ ಅಂಗವಿಕಲರ ವೇತನ ಮತ್ತು ರಾಷ್ಟ್ರೀಯ ಕುಟುಂಬ ನೆರವು ಯೋಜನೆಗಳನ್ನು ಜಾರಿಗೊಳಿಸಲಾಗುತ್ತಿದೆ.

| ಕ್ರ. ಸಂ. | ಯೋಜನೆ | ಅರ್ಹತೆಗಳು | ಪಿಂಚಣಿ ಮೊತ್ತ | | ಕೇಂದ್ರ ಸರ್ಕಾರದಿಂದ ಸಹಾಯಧನ ಪೂರೈಸಲು ಅನುಮತಿಸಿರುವ ಫಲಾನುಭವಿಗಳ ಸಂಖ್ಯೆ |
|---|---|---|---|---|---|
| | | | ಕೇಂದ್ರ | ರಾಜ್ಯ | |
| 1 | ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ | ಬಡತನ ರೇಖೆಗಿಂತ ಕೆಳಗಿರುವ 60 ವರ್ಷಕ್ಕಿಂತ ಹೆಚ್ಚು ವಯಸ್ಸಾದ ಹಿರಿಯ ನಾಗರೀಕರು 60 ರಿಂದ 65 ವರ್ಷದವರಿಗೆ | 200 | – | 895818 |
| | | 65 ರಿಂದ 79 ವರ್ಷದವರಿಗೆ | 200 | 300 | |
| | | 80 ವರ್ಷ ಮೇಲ್ಪಟ್ಟವರಿಗೆ | 500 | 250 | |
| 2 | ಇಂದಿರಾ ಗಾಂಧಿ ರಾಷ್ಟ್ರೀಯ ವಿಧವಾ ವೇತನ | ಬಡತನ ರೇಖೆಗಿಂತ ಕೆಳಗಿರುವ 40 ರಿಂದ 79 ವರ್ಷ ವಯಸ್ಸಿನ ವಿಧವೆಯರಿಗೆ | 300 | 200 | 558653 |
| 3 | ಇಂದಿರಾ ಗಾಂಧಿ ರಾಷ್ಟ್ರೀಯ ಅಂಗವಿಕಲರ ವೇತನ | ಬಡತನ ರೇಖೆಗಿಂತ ಕೆಳಗಿರುವ 18 ರಿಂದ 79 ವರ್ಷ ವಯಸ್ಸಿನ ಬಹುವಿಧ ಅಂಗವಿಕಲತೆ ಇರುವ ಅಂಗವಿಕಲರಿಗೆ | 300 | 200 | 43639 |
| 4 | ರಾಷ್ಟ್ರೀಯ ಕುಟುಂಬ ನೆರವು ಯೋಜನೆ | ಬಡತನ ರೇಖೆಗಿಂತ ಕೆಳಗಿರುವ ಕುಟುಂಬದ 18 ಕ್ಕಿಂತ ಹೆಚ್ಚಿಗೆ ಮತ್ತು 59 ಕ್ಕಿಂತ ಕಡಿಮೆ ವಯಸ್ಸುಳ್ಳ ದುಡಿಯುವ ಮುಖ್ಯ ವ್ಯಕ್ತಿಯ ಮರಣವಾದಲ್ಲಿ | ಒಂದು ಬಾರಿ ನೀಡುವ ಸಹಾಯಧನ ಮೊತ್ತ ರೂ. 20000/- | | 18312 |

## 2. ರಾಜ್ಯ ಸರ್ಕಾರ ಪುರಸ್ಕೃತ ಯೋಜನೆಗಳು :

| ಕ್ರ. ಸಂ. | ಯೋಜನೆ | ಅರ್ಹತೆ | ಪಿಂಚಣಿ ಮೊತ್ತ | ಫಲಾನುಭವಿಗಳು |
|---|---|---|---|---|
| 1 | ನಿರ್ಗತಿಕ ವಿಧವಾ ವೇತನ | ಬಡತನ ರೇಖೆಗಿಂತ ಕೆಳಗಿರುವ 18–64 ವಯಸ್ಸಿನ ನಿರ್ಗತಿಕ ವಿಧವೆಯರಿಗೆ | 500 | 1620771 |
| 2 | ಅಂಗವಿಕಲರ ಮಾಸಾಶನ | ಬಡತನ ರೇಖೆಗಿಂತ ಕೆಳಗಿರುವ ಶೇ. 40 ಕ್ಕಿಂತ ಹೆಚ್ಚು ಅಂಗವಿಕಲತೆ ಇರುವ ಅಂಗವಿಕಲರಿಗೆ | 500 | 481454 |
| | | ಶೇ. 40 ಕ್ಕಿಂತ ಹೆಚ್ಚು ಅಂಗವಿಕಲತೆ ಇರುವ ಅಂಗವಿಕಲರಿಗೆ | 1200 | 377759 |
| 3 | ಸಂಧ್ಯಾ ಸುರಕ್ಷಾ ಯೋಜನೆ | 65 ವರ್ಷ ಮೇಲ್ಪಟ್ಟ ಹಾಗೂ ವಾರ್ಷಿಕ ಆದಾಯ ರೂ.20000/– ಕ್ಕಿಂತ ಕಡಿಮೆ ಇರುವ ಹಿರಿಯ ನಾಗರೀಕರಿಗೆ | 500 | 2367077 |
| 4 | ಮನಸ್ವಿನಿ ಯೋಜನೆ | ಬಡತನ ರೇಖೆಗಿಂತ ಕೆಳಗಿರುವ 40 ರಿಂದ 64 ವರ್ಷದೊಳಗಿನ ಅವಿವಾಹಿತ ಹಾಗೂ ವಿಚ್ಛೇದಿತ ಮಹಿಳೆಯರಿಗೆ | 500 | 88402 |
| 5 | ಮೈತ್ರಿ ಯೋಜನೆ | ಬಡತನ ರೇಖೆಗಿಂತ ಕೆಳಗಿರುವ 25 ರಿಂದ 64 ವರ್ಷದೊಳಗಿರುವ ಲಿಂಗತ್ವ ಅಲ್ಪ ಸಂಖ್ಯಾತರಿಗೆ | 500 | 1239 |
| 6 | ಎಂಡೋಸಲ್ಫಾನ್ ಸಂತ್ರಸ್ಥರಿಗೆ ಮಿತ ವೇತನ | ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಗುರುತಿಸಲಾದ ಎಂಡೋಸಲ್ಫಾನ್ ಸಂತ್ರಸ್ಥರಿಗೆ ಶೇ.25 ರಿಂದ 59 ಅಂಗವೈಕಲತೆ ಯುಳ್ಳವರಿಗೆ | 1500 | 6068 |
| | | ಶೇ. 60 ಮೇಲ್ಪಟ್ಟ ಅಂಗವೈಕಲತೆಯುಳ್ಳವರಿಗೆ | 3000 | |
| 7 | ಸಾಲಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತ ಪತ್ನಿಯರಿಗೆ ಪರಿಷ್ಕರಿಸಿದ ವಿಧವಾ ವೇತನ | ಕೃಷಿ ಇಲಾಖೆಯಿಂದ ರೈತರ ಆತ್ಮಹತ್ಯೆ ಪ್ರಕರಣಗಳಡಿ ಗುರುತಿಸಿ ಪರಿಹಾರ ಪಡೆದಿರುವ ಮೃತ ರೈತರ ಪತ್ನಿಗೆ | 2000 | 1424 |
| 8 | ಆಸಿಡ್ ದಾಳಿಗೆ ಒಳಗಾದ ಮಹಿಳೆಯರಿಗೆ ಸಹಾಯಧನ | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಈಗಾಗಲೇ ಗುರುತಿಸಿ ಪರಿಹಾರ | 3000 | 13 |

| | | | | |
|---|---|---|---|---|
| | | ಪಡೆದುಕೊಂಡಿರುವ ಅಸಿಡ್ ದಾಳಿಗೊಳಗಾದ ಮಹಿಳೆಯರಿಗೆ | | |
| 9 | ಅಂತ್ಯ ಸಂಸ್ಕಾರ ಯೋಜನೆ | ಬಡತನ ರೇಖೆಗಿಂತ ಕೆಳಮಟ್ಟದಲ್ಲಿರುವ ಕುಟುಂಬದ ಸದಸ್ಯರು ಮೃತಪಟ್ಟಲ್ಲಿ ಅವರ ಅಂತಿಮ ಕ್ರಿಯೆಗಾಗಿ ನೀಡುವ ಸಹಾಯಧನ | ಒಂದು ಬಾರಿ ನೀಡುವ ಸಹಾಯಧನ ಮೊತ್ತ ರೂ. 5000/- | |
| 10 | ಆದರ್ಶ ವಿವಾಹ ಯೋಜನೆ | ಕನಿಷ್ಟ 25 ವಿವಾಹಗಳು ನಗರ ಪ್ರದೇಶದಲ್ಲಿ ಮತ್ತು ಕನಿಷ್ಟ 10 ವಿವಾಹಗಳು ಗ್ರಾಮಾಂತರ ಪ್ರದೇಶದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿವಾಹವಾಗುವ ಜೋಡಿಗೆ | ಒಂದು ಬಾರಿ ನೀಡುವ ಪ್ರೋತ್ಸಾಹಧನ ಮೊತ್ತ ರೂ. 10000/- | |
| 11 | ಆಮ್ ಆದ್ಮಿ ಬೀಮಾ ಯೋಜನೆ (ಕೇಂದ್ರ ಸರ್ಕಾರ ಪುರಸ್ಕೃತ ಯೋಜನೆ) | ಗ್ರಾಮೀಣ ಭೂ ರಹಿತ ಕುಟುಂಬಗಳ ಜೊತೆಗೆ 72 ವಿವಿಧ ಕಸುಬುದಾರ ಕುಟುಂಬಗಳಿಗೆ ಮರಣದ/ಅಂಗವಿಕಲತೆಯ ಸಂದರ್ಭದಲ್ಲಿ ನೀಡುವ ಆರ್ಥಿಕ ನೆರವು | ವಿಮೆ ಕಂತು ರೂ.200<br>ರೂ. 100 ರಾಜ್ಯ ಸರ್ಕಾರ<br>ರೂ. 100 ಎಲ್.ಐ.ಸಿ. ಭರಿಸುತ್ತದೆ<br>ನೈಸರ್ಗಿಕ ಸಾವು: ರೂ. 30000, ಆಕಸ್ಮಿಕ ಸಾವು ರೂ.75000, ಶಾಶ್ವತ ಅಂಗವಿಕಲತೆ ರೂ.75000, ಭಾಗಶ: ಅಂಗವಿಕಲತೆ ರೂ.37000 ಹಾಗೂ ವಿದ್ಯಾರ್ಥಿ ವೇತನ: ಎರಡು ಮಕ್ಕಳಿಗೆ, 9 ರಿಂದ 12 ನೇ ತರಗತಿವರೆಗೆ (ಪ್ರತಿ ತಿಂಗಳಿಗೆ ರೂ.100 ಪ್ರತಿ ವಿದ್ಯಾರ್ಥಿಗೆ) | |

## 3. ಪರಿಶಿಷ್ಟ ಜಾತಿ ಮತ್ತು ಗಿರಿಜನ ಉಪಯೋಜನೆ

2016-17 ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಉಪಯೋಜನೆಯಡಿ ಒದಗಿಸಲಾಗಿದ್ದ 457.01 ಕೋಟಿ ರೂ. ಅನುದಾನದಲ್ಲಿ 455.49 ಕೋಟಿ ರೂ. ವೆಚ್ಚದೊಂದಿಗೆ ಶೇಕಡಾ 99.66 ಮತ್ತು ಗಿರಿಜನ ಉಪಯೋಜನೆಯಡಿ ಒದಗಿಸಲಾಗಿದ್ದ 115.09 ಕೋಟಿ ರೂ. ಅನುದಾನದಲ್ಲಿ 114.15 ಕೋಟಿ ರೂ. ವೆಚ್ಚದೊಂದಿಗೆ ಶೇಕಡಾ 99.09 ಪ್ರಗತಿ ಸಾಧಿಸಲಾಗಿದೆ. ವಿವರ ಕೆಳಕಂಡಂತಿದೆ.

## 2016-17 ನೇ ಸಾಲಿನ ಮಾರ್ಚ್ 2017 ರ ಅಂತ್ಯದವರೆಗಿನ ವೆಚ್ಚದ ವಿವರ

### ಪರಿಶಿಷ್ಟ ಜಾತಿ ಉಪಯೋಜನೆ

ರೂ. ಲಕ್ಷಗಳಲ್ಲಿ

| ಕ್ರ. ಸಂ. | ಯೋಜನೆಗಳು | ಪರಿಶಿಷ್ಟ ಜಾತಿ ಉಪಯೋಜನೆ ಯಡಿ ನಿಗಧಿಪಡಿಸಿರುವ ಅನುದಾನ | ಭೌತಿಕ ಗುರಿ (ಫಲಾನುಭವಿ ಗಳು) | ಸಾಧಿಸಿರುವ ಭೌತಿಕ ಗುರಿ (ಫಲಾನುಭವಿ ಗಳು) | ಮಾರ್ಚ್ 2017 ಅಂತ್ಯದವರೆಗೆ ವೆಚ್ಚದ ವಿವರ | ಶೇ. |
|---|---|---|---|---|---|---|
| 1 | ಇಂದಿರಾಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ | **25745** | 429083 | 429083 | **25745** | 100 |
| 2 | ನಿರ್ಗತಿಕ ವಿಧವಾ ವೇತನ | **15657** | 260950 | 260950 | **15657** | 100 |
| 3 | ಅಂಗವಿಕಲ ವೇತನ | **1459** | 24317 | 24317 | **1459** | 100 |
| 4 | ರಾಷ್ಟ್ರೀಯ ಕುಟುಂಬ ನೆರವು ಯೋಜನೆ | 1777 | 8885 | 8735 | **1747** | 98 |
| 5 | ಅಂತ್ಯ ಸಂಸ್ಕಾರ ಯೋಜನೆ | **263** | 5260 | 5154 | **257.70** | 98 |
| 6 | ಆಮ್ ಆದ್ಮಿ ಭೀಮಾ ಯೋಜನೆ | **800** | 800000 | 683510 | **683.51** | 85 |
| | ರೂ. | **45701** | | | **45549.21** | 99.66 |

### ಗಿರಿಜನ ಉಪಯೋಜನೆ

ರೂ. ಲಕ್ಷಗಳಲ್ಲಿ

| ಕ್ರ. ಸಂ. | ಯೋಜನೆಗಳು | ಗಿರಿಜನ ಉಪಯೋಜನೆ ಯಡಿ ನಿಗಧಿಪಡಿಸಿರುವ ಅನುದಾನ | ಭೌತಿಕ ಗುರಿ (ಫಲಾನುಭವಿ ಗಳು) | ಸಾಧಿಸಿರುವ ಭೌತಿಕ ಗುರಿ (ಫಲಾನುಭವಿಗ ಳು) | ಮಾರ್ಚ್ 2017 ಅಂತ್ಯದವರೆಗೆ ವೆಚ್ಚದ ವಿವರ | ಶೇ. |
|---|---|---|---|---|---|---|
| 1 | ಇಂದಿರಾಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ | **6866** | 114433 | 114433 | **6866** | 100 |
| 2 | ನಿರ್ಗತಿಕ ವಿಧವಾ ವೇತನ | **3479** | 57983 | 57983 | **3479** | 100 |
| 3 | ಅಂಗವಿಕಲ ವೇತನ | **324** | 5400 | 5400 | **324** | 100 |
| 4 | ರಾಷ್ಟ್ರೀಯ ಕುಟುಂಬ ನೆರವು ಯೋಜನೆ | **570** | 2850 | 2605 | **521.05** | 91 |
| 5 | ಅಂತ್ಯ ಸಂಸ್ಕಾರ ಯೋಜನೆ | **70** | 1400 | 1315 | **65.76** | 94 |
| 6 | ಆಮ್ ಆದ್ಮಿ ಭೀಮಾ ಯೋಜನೆ | **200** | 200000 | 159280 | **159.28** | 80 |
| | ರೂ. | **11509** | | | **11415.09** | 99 |

## 4. ಅರ್ಜಿಗಳ ವಿಲೇವಾರಿ

2016–17 ನೇ ಸಾಲಿನಲ್ಲಿ ಸ್ವೀಕರಿಸಿದ ಅರ್ಜಿಗಳ ಪೈಕಿ ಶೇಕಡಾ 91.12 ವಿಲೇವಾರಿ ಮಾಡಲಾಗಿದೆ. ಬಾಕಿಯಿರುವ ಅರ್ಜಿಗಳು ಸಕಾಲ ಮಿತಿಯಲ್ಲಿರುವ ಅರ್ಜಿಗಳಾಗಿದೆ. ವಿಲೇವಾರಿಯಾದ ಅರ್ಜಿಗಳಲ್ಲಿ ಶೇಕಡಾ 97.5 ಅರ್ಜಿಗಳು ಸಕಾಲ ಕಾಲಮಿತಿಯೊಳಗೆ ಇತ್ಯರ್ಥಗೊಂಡಿದೆ.

ಮನಸ್ವಿನಿ ಮತ್ತು ಮೈತ್ರಿ ಯೋಜನೆಗಳನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಆಸುಇ/147/ನಾಸೇಖಾ/2016 ದಿನಾಂಕ 28.10.2016 ರನ್ವಯ ಸಕಾಲ ಯೋಜನೆಯಡಿ ತರಲಾಗಿದ್ದು, 45 ದಿನಗಳ ಕಾಲಮಿತಿಯನ್ನು ನಿಗಧಿಪಡಿಸಲಾಗಿದೆ. ಈಗಾಗಲೇ ಸಕಾಲ ಯೋಜನೆಯಡಿ ಇದ್ದ ಪಿಂಚಣಿ ಯೋಜನೆಗಳಾದ ವೃದ್ಧಾಪ್ಯ ವೇತನ, ವಿಧವಾ ವೇತನ, ಅಂಗವಿಕಲ ವೇತನ ಮತ್ತು ಸಂಧ್ಯಾ ಸುರಕ್ಷಾ ಯೋಜನೆಗಳಿಗೆ ಸಂಬಂಧಿಸಿದಂತೆ ಅರ್ಜಿಗಳ ವಿಲೇವಾರಿಗೆ ನಿಗಧಿಪಡಿಸಲಾಗಿದ್ದ ಕಾಲ ಮಿತಿಯನ್ನು 70 ದಿನಗಳಿಂದ 45 ದಿನಗಳಿಗೆ ಇಳಿಸಿ ನಿಗಧಿಪಡಿಸಲಾಗಿದೆ.

ಅರ್ಜಿ ವಿಲೇವಾರಿ ಕಾಲಮಿತಿ ಬದಲಾವಣೆಯನ್ನು ನಾಡಕಛೇರಿ ತಂತ್ರಾಂಶದಲ್ಲಿಯೂ ಸಹ ಅಳವಡಿಸಲಾಗಿದೆ. ಸಕಾಲ ಕಾಲಮಿತಿ ಮೀರಿ ಬಾಕಿ ಉಳಿದ ಯೋಜನಾವಾರು ಅರ್ಜಿಗಳ ಕುರಿತು ನಾಡಕಛೇರಿ ಉಪ ತಹಶೀಲ್ದಾರರು ಹಾಗೂ ತಹಶೀಲ್ದಾರರಿಗೆ sms alert ನ್ನು ದಿನಂಪ್ರತಿ ಕಳುಹಿಸುವಲ್ಲಿ ಕ್ರಮವಹಿಸಲಾಗಿದೆ. ಅರ್ಜಿಗಳ ವಿಲೇವಾರಿ ವಿವಿರ ಈ ಕೆಳಕಂಡಂತಿದೆ.

**ಅವಧಿ: ಏಪ್ರಿಲ್ 2016 ರಿಂದ ಮಾರ್ಚ್ 2017 ವರೆಗೆ**

| ಯೋಜನೆಗಳು | ಸ್ವೀಕರಿಸಿದ ಅರ್ಜಿಗಳು | ವಿಲೇವಾರಿ | ಸಕಾಲ ಕಾಲ ಮಿತಿಯಲ್ಲಿ ವಿಲೆಗೊಳಿಸಿದ ಅರ್ಜಿಗಳು | ಶೇ. | ಸಕಾಲ ಕಾಲ ಮಿತಿ ಮೀರಿ ವಿಲೆಗೊಳಿಸಿದ ಅರ್ಜಿಗಳು | ಶೇ. |
|---|---|---|---|---|---|---|
| ವೃದ್ಧಾಪ್ಯ ವೇತನ | 97046 | 87930 | 85452 | 97.18 | 2478 | 2.82 |
| ವಿಧವಾ ವೇತನ | 177369 | 161468 | 156840 | 97.13 | 4628 | 2.87 |
| ಅಂಗವಿಕಲ ವೇತನ | 97046 | 87930 | 85452 | 97.18 | 2478 | 2.82 |
| ಸಂಧ್ಯಾ ಸುರಕ್ಷಾ | 412355 | 375267 | 368616 | 98.23 | 6651 | 1.77 |
| ಮನಸ್ವಿನಿ | 24090 | 22304 | 19438 | 87.15 | 2866 | 12.85 |
| ಮೈತ್ರಿ | 381 | 358 | 317 | 88.55 | 41 | 11.45 |
| ಒಟ್ಟು | **808287** | **735257** | **716115** | **97.40** | **19142** | **2.60** |

## 5. ನೇರ ಹಣ ಸಂದಾಯ ಯೋಜನೆ:

- ➢ ವಿವಿಧ ಮಾಸಿಕ ಪಿಂಚಣಿ ಯೋಜನೆಗಳಡಿ ಸೌಲಭ್ಯ ಪಡೆಯುತ್ತಿರು ಫಲಾನುಭವಿಗಳಿಗೆ ಆಧಾರ್ ಆಧಾರಿತ ಬ್ಯಾಂಕ್/ಅಂಚೆ ಕಚೇರಿ ಖಾತೆಗೆ ನೇರ ಪಿಂಚಣಿ ಸಂದಾಯ (DBT) ಮಾಡುವ ನಿಟ್ಟಿನಲ್ಲಿ ವಿಶೇಷ ಆಂದೋಲನ ಹಮ್ಮಿಕೊಳ್ಳುವ ಮೂಲಕ ಫಲಾನುಭವಿಗಳ ಆಧಾರ್ ಸಂಗ್ರಹಣೆ ಕಾರ್ಯ. ಸಂಗ್ರಹಿತ ಆಧಾರ್ ಮಾಹಿತಿಯ ಮೌಲ್ವೀಕರಣ.
  - ಆಧಾರ್ ಸಂಖ್ಯೆ ಸಂಗ್ರಹಣೆ– 37.75ಲಕ್ಷ ಫಲಾನುಭವಿಗಳು (ಶೇ.66.3)
  - 1.37ಲಕ್ಷ ಮರಣ ಹೊಂದಿದ/ವಲಸೆ ಹೋಗಿರುವ ಫಲಾನುಭವಿಗಳನ್ನು ಗುರುತಿಸಲಾಗಿದ್ದು, ಖಜಾನೆಯಲ್ಲಿ ರದ್ದುಗೊಳಿಸಲು ತಾಲ್ಲೂಕುಗಳಿಗೆ ಕಳುಹಿಸಲಾಗಿದೆ.
  - ಆಧಾರ ಸಂಖ್ಯೆ ಆಧಾರದ ಮೇಲೆ ಒಂದಕ್ಕಿಂತ ಹೆಚ್ಚು ಪಿಂಚಣಿ ಪಡೆಯುತ್ತಿರುವ 94475 ಫಲಾನುಭವಿಗಳನ್ನು ಗುರುತಿಸಿ ಪರಿಶೀಲಿಸಿ ಕ್ರಮವಹಿಸಲು ತಾಲ್ಲೂಕಿಗೆ ಕಳುಹಿಸಲಾಗಿದೆ.
- ➢ ಅಂಚೆ ಕಚೇರಿ ಇ–ಮಾನಿಯಾರ್ಡರ್ ಮೂಲಕ ಪಿಂಚಣಿ ಪಡೆಯುತ್ತಿರುವ 38.39ಲಕ್ಷ ಫಲಾನುಭವಿಗಳಿಗೆ ಅಂಚೆ ಖಾತೆ ತೆರೆಯುವಲ್ಲಿ ಹಾಗೂ ಫಲಾನುಭವಿಗಳ ಒಪ್ಪಿಗೆ ಪತ್ರ ಪಡೆಯುವಲ್ಲಿ ಅಂಚೆ ಇಲಾಖೆ ಸಮನ್ವಯೊಂದಿಗೆ ಜಿಲ್ಲಾ ಆಡಳಿತದ ಮೂಲಕ ಕ್ರಮವಹಿಸಲಾಗಿದೆ.
  - ಇ–ಮನಿಯಾರ್ಡರ್ ಫಲಾನುಭವಿಗಳಿಗೆ ಹೊಸದಾಗಿ ತೆರೆಯಲಾದ ಅಂಚೆಖಾತೆ – 23ಲಕ್ಷ
  - ಆಧಾರ್ ಸಂಖ್ಯೆ ಜೋಡಿಸಲಾದ ಅಂಚೆ ಖಾತೆ– 5.77ಲಕ್ಷ
  - ಆಧಾರ್ ಸಂಖ್ಯೆ ಜೋಡಿಸಲಾದ ಬ್ಯಾಂಕ್ ಖಾತೆ– 5.23ಲಕ್ಷ

## 6. ಖಜಾನಾ–2 ಯೋಜನೆ:

➢ ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ನಿರ್ದೇಶನಾಲಯದ B.M.S ತಂತ್ರಾಶವನ್ನು ಖಜಾನೆ ಇಲಾಖೆಯ ಖಜಾನಾ–2 ಗೆ ಸಂಯೋಜನೆಗೊಳಿಸುವುದರಿಂದ ಪಿಂಚಣಿ ಮಂಜೂರಾತಿ ಆದೇಶವನ್ನು ನೇರವಾಗಿ ತಂತ್ರಾಂಶದ ಮುಖಾಂತರ ಖಜಾನೆಗೆ ಕಳುಹಿಸಲಾಗುವುದು. ಇದರಿಂದ ಅನಗತ್ಯ ವಿಳಂಬವನ್ನು ತಡೆಯಬಹುದಾಗಿರುವುದಲ್ಲದೇ ತಂತ್ರಾಂಶ ಜೋಡಣೆಯಿಂದ ಫಲಾನುಭವಿಗಳಿಗೆ ಪಿಂಚಣಿ ಪಾವತಿಯಾಗಿರುವುದನ್ನು ಖಚಿತಪಡಿಸಿಕೊಳ್ಳಬಹುದಾಗಿದೆ.

➢ ಖಜಾನಾ–2 Geo-Location Master ಹಾಗೂ ನಾಡಕಛೇರಿಯಲ್ಲಿ ಉಪಯೋಗಿಸುತ್ತಿರುವ RDS Master Mapping ಪೂರ್ಣಗೊಳಿಸಲಾಗಿದೆ.

- ಖಜಾನೆ 2 ಜಾರಿಗೆ ತರಲಾದ ತಾಲ್ಲೂಕುಗಳು – 60
- ಇದುವರೆವಿಗೆ ಖಜಾನಾ– 2 ಗೆ ಕಳುಹಿಸಲಾಗಿರುವ ಹೊಸ ಮಂಜೂರಾತಿ ಪ್ರಕರಣಗಳು– 57042
- ಈಗಾಗಲೇ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳು – 89459 ಫಲಾನುಭವಿಗಳ ಮಾಹಿತಿಯನ್ನು ಪರೀಕ್ಷಾರ್ಥ ನೀಡಲಾಗಿದೆ ಹಾಗೂ 11.36ಲಕ್ಷ ಫಲಾನುಭವಿಗಳ ಮಾಹಿತಿಯ ಮೌಲ್ವೀಕರಣ ಅಂತಿಮ ಹಂತದಲ್ಲಿದ್ದು, ಪರೀಕ್ಷಾ ತಂತ್ರಾಂಶಕ್ಕೆ ವರ್ಗಾಯಿಸಲು ಕ್ರಮವಹಿಸಲಾಗುತ್ತಿದೆ.

## 2016–17 ನೇ ಸಾಲಿನಲ್ಲಿ ಸಾಧಿಸಿದ ಭೌತಿಕ ಮತ್ತು ಆರ್ಥಿಕ ಪ್ರಗತಿ ವರದಿ

ರೂ. ಕೋಟಿಗಳಲ್ಲಿ

| ಕ್ರ. ಸಂ | ಯೋಜನೆಗಳು | 2016–17 ನೇ ಸಾಲಿನ ಅಂತ್ಯಕ್ಕೆ ಫಲಾನುಭವಿಗಳ ಸಂಖ್ಯೆ | 2016–17ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನ | 2016–17ನೇ ಸಾಲಿನಲ್ಲಿ ಖರ್ಚಾದ ಅನುದಾನ | ಶೇಕಡಾವಾರು |
|---|---|---|---|---|---|
| | **ಮಾಸಿಕ ಪೋಷಣಾ ಭತ್ಯೆ ಯೋಜನೆಗಳು** | | | | |
| 1 | ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ | 747092 | 521.03 | 413.72 | 79 |
| 2 | ನಿರ್ಗತಿಕ ವಿಧವಾ ವೇತನ | 1620771 | 1009.19 | 951.22 | 94 |
| 3 | ಅಂಗವಿಕಲ ವೇತನ ಶೇ 40 ಕ್ಕಿಂತ ಹೆಚ್ಚು ಅಂಗವೈಕಲ್ಯತೆ ಹೊಂದಿರುವ ಫಲಾನುಭವಿಗಳು ಸಂಖ್ಯೆ | 481454 | 906.57 | 829.34 | 91 |
| | ಶೇ.75 ಕ್ಕಿಂತ ಹೆಚ್ಚು ಅಂಗವೈಕಲ್ಯತೆ ಹೊಂದಿರುವ ಫಲಾನುಭವಿಗಳ ಸಂಖ್ಯೆ | 377759 | | | |
| 4 | ಸಂಧ್ಯಾ ಸುರಕ್ಷಾ ಯೋಜನೆ | 2367077 | 1455.24 | 1394.80 | 96 |
| 5 | ಮನಸ್ವಿನಿ ಯೋಜನೆ | 88402 | 63.00 | 52.32 | 83 |
| 6 | ಮೈತ್ರಿ | 1239 | 3.15 | 0.77 | 24 |
| 7 | ಎಂಡೋಸಲ್ಫಾನ್ ಸಂತ್ರಸ್ತರಿಗೆ ಮಿತ ವೇತನ | 6068 | 22.68 | 20.84 | 92 |
| 8 | ಸಾಲಭಾದೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತಪತ್ನಿಯರಿಗೆ ಪರಷ್ಕರಿಸಿದ ವಿಧವಾ ವೇತನ | 1424 | 5.29 | 1.21 | 24 |
| 9 | ಆಸಿಡ್ ದಾಳಿಗೆ ಒಳಗಾದ ಮಹಿಳೆಯರಿಗೆ ಸಹಾಯಧನ | 13 | 0.57 | 0.03 | 5 |
| | **ಇತರೆ ಸಾಮಾಜಿಕ ಭದ್ರತಾ ಯೋಜನೆಗಳು :** (ಒಂದು ಬಾರಿ ಸಹಾಯಧನ ನೀಡುವ ಯೋಜನೆಗಳು) | | | | |
| 1 | ರಾಷ್ಟ್ರೀಯ ಕುಟುಂಬ ನೆರವು ಯೋಜನೆ | 47976 | 97.97 | 95.95 | 98 |
| 2 | ಅಂತ್ಯ ಸಂಸ್ಕಾರ ನೆರವು ಯೋಜನೆ | 48330 | 24.67 | 24.17 | 98 |
| 3 | ಆದರ್ಶ ವಿವಾಹ ಯೋಜನೆ | 1101 | 1.17 | 1.10 | 94 |
| 4 | ಆಮ್ ಆದ್ಮಿ ಬೀಮಾ ಯೋಜನೆ | 1935859 | 17.50 | 15.93 | 91 |
| | ಒಟ್ಟು | | **4128.03** | **3801.40** | **92** |